ಎಂದನಂತೆ. ನಮಗೆ ತಿಳಿಯದೆ ಇಲ್ಲಿ ಅಂಥದ್ದೇನು ನಡೆದಿದೆ ಎಂದು ಬೇಕಲ್ಲ. ನಾಳೆ ಎಂ.ಡಿ. ಕೇಳಿದರೆ ನಾನೇನು ಹೇಳಬೇಕು? ಯಾರಿಗೂ ಸುಳಿವು ನೀಡದೆ, ಅಂಥದ್ದೇನು ನಡೆದಿದೆ ಅಂತ ಪತ್ತೆ ಮಾಡು'' ಎಂದರಾತ.

''ಆತ ಹಾಗೆ ಎಲ್ಲಿ ಹೇಳಿದ್ದು?'' ಕೇಳಿದೆ ನಾನು.

''ಎಲ್ಲೋ... ಕುಡಿದು ಹೇಳಿದ್ದನಂತೆ. ಆ ಐದಾರು ಮಂದಿ ಯಾರು ಯಾರು... ನೌಕರಿ ಕಳೆದುಕೊಳ್ಳುವಂಥ ಕೆಲಸ ಏನು ಮಾಡಿದ್ದಾರೆ ಅಂತ ಪತ್ತೆ ಮಾಡು'' ಎಂದರು.

''ಕುಡಿದ ಅಮಲಿನಲ್ಲಿ ಹೇಳಿದ್ದನ್ನು ನಾವಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾ? ತನಿಖೆ ಬೇಕಾ ಸರ್? ನನಗೇನೋ ಸುಮ್ಮನೆ ಸಮಯ ಹಾಳು ಅನ್ನಿಸುತ್ತಿದೆ. ಆದರೂ ಮೂರ್ನಾಲ್ಕು ದಿನ ಕೊಡಿ, ಏನು ವಿಷಯ ಅಂತ ತಿಳಿದು ವಿವರ ಕೊಡುತ್ತೇನೆ'' ಎಂದೆ.

''ಅಷ್ಟು ಮಾಡು'' ಎಂದರು ಮ್ಯಾನೇಜರ್.

★★★

ಈ ಕೆಲಸ ಎಲ್ಲಿಂದ ಆರಂಭಿಸುವುದು? ಆಫೀಸಿನಲ್ಲಿ ನನ್ನ ಭರವಸೆಯ ಇಬ್ಬರು ನೌಕರರಿದ್ದರು. ಅದೇನೇ ತನಿಖೆ ಇದ್ದರೂ ನಾನು ಆರಂಭಿಸುವುದು ಅವರಿಂದಲೇ. ಅವರನ್ನೇ ಕರೆದು ಕೇಳಿದೆ. ಅವರಲ್ಲಿ ಒಬ್ಬಾತ ಒಂದು ಮಾಹಿತಿ ನೀಡಿದ.

''ಒಂದು ತಿಂಗಳ ಹಿಂದೆ ಮುಕುಂದ, ಲಿಗೋ, ಡಿಸೋಜ ಮತ್ತು ಹುಸೈನರಿಗೆ ಕುಡಿದ ಅಮಲಿನಲ್ಲಿ ಭೀಮಸೇನನೊಂದಿಗೆ ಜಗಳವಾಗಿದೆ. ಏನೋ ಮಾತು ಬಂದು ಭೀಮಸೇನ ಕೆರಳಿ ಬಾಟಲಿಯನ್ನೇ ಗದೆಯಂತೆ ತಿರುಗಿಸಿ ಲಿಗೋನ ಮೇಲೆ ಹಲ್ಲೆಮಾಡಲು ಹೊರಟಿದ್ದನಂತೆ. ಬಾರಿನ ನೌಕರರು ಎಲ್ಲರನ್ನೂ ಬೇರ್ಪಡಿಸಿ ಹೊರಗೆ ಕಳುಹಿಸಿದ್ದಾರೆ. ಇದಿಷ್ಟು ನಡೆದದ್ದು. ಕಾರಣ ಏನು, ಯಾವ ವಿಷಯಕ್ಕೆ ಜಗಳ ಎನ್ನುವ ಬಗ್ಗೆ ಆ ನಾಲ್ವರು ಇಂದಿಗೂ ಬಾಯಿ ಬಿಟ್ಟಿಲ್ಲ. ಭೀಮಸೇನನೂ ತೆಪ್ಪಗಿದ್ದಾನೆ. ಅವನಿಗೆ ಬಾಯಿಬಿಡದಂತೆ ಬೆದರಿಕೆ ಹಾಕಿದ್ದಾರೆ ಅನಿಸುತ್ತೆ'' ಎಂದ ಆತ.

ಇಷ್ಟನ್ನು ತಿಳಿದ ನಾನು ಡಿಸೋಜ ಮತ್ತು ಹುಸೈನರನ್ನು ಒಬ್ಬೊಬ್ಬರಾಗಿ ಕರೆಸಿದೆ. ಜಗಳವಾದುದನ್ನು ಅವರು ಒಪ್ಪಿಕೊಂಡು, ''ಅದೆಲ್ಲ ಕುಡಿದ ಅಮಲಿನಲ್ಲಿ ನಡೆದದ್ದು. ಯಾಕೆ ಏನು ಅಂತ ಯಾರಿಗೂ ನೆನಪಿಲ್ಲ ಸರ್. ಅದನ್ನು ಅಲ್ಲೇ ಮರೆತು ಬಿಟ್ಟಿದ್ದೇವೆ'' ಎಂದಷ್ಟೇ ಹೇಳಿದರೇ ಹೊರತು ಜಗಳ ನಡೆದದ್ದೇಕೆ ಎಂಬ ಗುಟ್ಟುಬಿಟ್ಟುಕೊಡಲಿಲ್ಲ.

ನನಗೆ ಭೀಮಸೇನನ ಬಾಯಿ ಬಿಡಿಸದೆ ಅನ್ಯಮಾರ್ಗವಿರಲಿಲ್ಲ. ಎಂದಿನಂತೆ ಸಂಜೆ ಚಹಾ ತಂದವನಲ್ಲಿ, ''ಕ್ಯಾಬಿನ್ ಬಾಗಿಲು ಹಾಕಿ ಬಾ'' ಎಂದೆ. ಏನೋ ಸಮಸ್ಯೆಯಾಗಿದೆ ಎಂದರಿತ ಭೀಮಸೇನ ಗಲಿಬಿಲಿಗೊಂಡು ಬಾಗಿಲು ಹಾಕಿ ಬಂದು ನಿಂತ.

''ನೀನು ಕುಡಿಯುತ್ತೀಯಾ?'' ಕೇಳಿದೆ ನಾನು.

''ಇಲ್ಲ ಸರ್'' ಎಂದು ಉತ್ತರಕೊಟ್ಟು ತಲೆತಗ್ಗಿಸಿ ನಿಂತ.

''ನಿನ್ನ ಮೇಲೆ ಹಾಗೆ ಆರೋಪ ಬಂದಿದೆ. ಇಲ್ಲಿ ಎಲ್ಲರೂ ಕುಡೀತಾರೆ. ಆದರೆ, ಸುದ್ದಿಯಾಗುವುದಿಲ್ಲ. ನಿನ್ನ ಹಾಗೆ ಕುಡಿದು ರಂಪಾಟ ಮಾಡುವುದಿಲ್ಲ. ಕುಡಿದು ಗಲಾಟೆ ಮಾಡಿದರೆ ಕಂಪನಿಯ ಹೆಸರಿಗೆ ಧಕ್ಕೆಯಾಗುತ್ತೆ. ಕಂಪನಿ ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುತ್ತದೆ. ಇದು ನಿನಗೆ ಗೊತ್ತಿರಬೇಕಲ್ಲ?'' ಎಂದೆ ನಾನು.

''ಗೊತ್ತು ಸರ್. ಹಾಗೆ ನಾನೇನೂ ಮಾಡಿಲ್ಲ'' ಎಂದ ಆತ.

''ವಾರಕ್ಕೆ ಎಷ್ಟು ದಿನ ಕುಡಿಯುತ್ತೀ? ಒಮ್ಮೆಗೆ ಎಷ್ಟು ಕುಡಿಯುತ್ತೀ?'' ಬೇಕೆಂತಲೇ ಮಸಾಲೆ ಹಚ್ಚಿ ಕೇಳಿದೆ.